**ಸಾಕ್ಷಿಗೆ ದಿನಾಂಕಃ 29-03-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರೋಪಿ ಪರ ಶ್ರೀ ಹೆಚ್ ಎಸ್ ವಕೀಲರಿಂದಃ**

ದಿಃ 26-04-2023 ರಂದು ಪಿರ್ಯಾದಿಯಿಂದ 8 ಲಕ್ಷ ರೂ. ಗಳನ್ನು ಸಾಲವಾಗಿ ಪಡೆದಿದ್ದು ಸದರಿ ಮೊತ್ತವನ್ನು 2 ತಿಂಗಳೊಳಗೆ ಮರುಪಾವತಿಸಬೇಕಾಗಿ ಮಾತುಕತೆಯಾಗಿರುತ್ತದೆ. ಸದರಿ ಮಾತುಕತೆಗೆ ಸಂಬಂಧಿಸಿದಂತೆ ನಾನು ಪಿರ್ಯಾದಿಗೆ ಪ್ರಾಂಸರಿ ಪತ್ರವನ್ನು ಬರೆದುಕೊಟ್ಟಿರುತ್ತೇನೆ. ಸದರಿ ಕರಾರು ಅವಧಿ ದಿಃ 26-06-2023 ರಂದು ಮುಗಿಯುವ ಮುನ್ನವೇ ಪಿರ್ಯಾದಿ ನಾನು ನೀಡಿದ ಚೆಕ್‌ನ್ನು ನಗದೀಕರಣಕ್ಕಾಗಿ ಸಲ್ಲಿಸಿರುತ್ತಾರೆ. ನಿಪಿ-1ನ್ನು ದಿಃ15-04-2023ರಂದು ನಗದೀಕರಣಕ್ಕಾಗಿ ಹಾಜರುಪಡಿಸಿರುತ್ತಾರೆ. 500 ರೂ ಮುಖ ಬೆಲೆಯ ಪ್ರಾಂಸರಿ ಪತ್ರವನ್ನು ದಿಃ 26-04-2023 ರಂದು ಖರೀದಿಮಾಡಿರುತ್ತೇನೆ. ಸದರಿ ಕರಾರಿನಂತೆ ನಾನು ಪಿರ್ಯಾದಿಯಿಂದ ಪಡೆದ ಸಾಲವನ್ನು ಹಿಂದಿರುಗಿಸಿದರೂ ಸಹ ನಾನು ಕೊಟ್ಟ 4 ಚೆಕ್ ಗಳನ್ನು ಪಿರ್ಯಾದಿ ನನಗೆ ಹಿಂದಿರುಗಿಸಿರುವುದಿಲ್ಲ. ಸದರಿ ಚೆಕ್ ಗಳಲ್ಲಿ ನಾನು ಸಹಿಯನ್ನು ಮಾತ್ರ ಮಾಡಿದ್ದು ಬೇರೆ ಯಾವುದೇ ಬರವಣಿಗೆಯನ್ನು ಮಾಡಿರುವುದಿಲ್ಲ.

ದಿಃ 12-03-2023 ರಂದು ನಾನು ಪಿರ್ಯಾದಿಯಿಂದ ಯಾವುದೇ ಸಾಲವನ್ನು ಪಡೆದಿಲ್ಲ. ಸದರಿ ಪಿರ್ಯಾದಿನಂತೆ ಸಾಲ ಪಡೆದ ದಿನಾಂಕ ಪ್ರಾಂಸರಿ ನೋಟು ಬರೆದುಕೊಡುವ ಮುನ್ನವೇ ಬರುತ್ತದೆ. ನಾನು ಪಿರ್ಯಾದಿಗೆ 15-06-2023 ರಂದು ಯಾವುದೇ ಚೆಕ್ ನ್ನು ಕೊಟ್ಟಿಲ್ಲ. ನಿಪಿ-1 ನ್ನು ಸಹ ನಾನು ಪಿರ್ಯಾದಿಗೆ ಕೊಟ್ಟಿಲ್ಲ. ನಿಪಿ-1 ನ್ನು ದಿಃ26-04-2023ರಂದು ಪಿರ್ಯಾದಿಗೆ ಲಕ್ಷ ರೂ. ಗಳನ್ನು ಸಾಲದ ಭದ್ರತೆಗಾಗಿ ಕೊಟ್ಟಿರುತ್ತೇನೆ. ಪಿರ್ಯಾದಿ ಸದರಿ ನಿಪಿ-1 ನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ನಾನು ಪಿರ್ಯಾದಿಗೆ ಯಾವುದೇ ಸಾಲವನ್ನು ಕೊಡಬೇಕಾಗಿಲ್ಲ. ಹಾಗಾಗಿ ಪ್ರಸ್ತುತ ಪಿರ್ಯಾದನ್ನು ವಜಾ ಮಾಡಲು ಕೇಳುತ್ತೇನೆ.

(ಪಿರ್ಯಾದಿ ಪರ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು)

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

**ಸಾಕ್ಷಿಗೆ ದಿನಾಂಕಃ 18-12-2024ರಂದು ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಮುಖ್ಯ ವಿಚಾರಣೆಃ ಅರೋಪಿ ಪರ ಶ್ರೀಮತಿ ಜಿ ಹೆಚ್ ಯು ವಕೀಲರಿಂದಃ</u>**

ನನಗೆ ಈ ಪ್ರಕರಣದ ಸಂಗತಿ ಸಮನ್ಸ್ ಬಂದಾಗ ತಿಳಿಯಿತು. ನಾನು ಪಿರ್ಯಾದುದಾರರಿಗೆ ಹಣವನ್ನು ಕೊಟ್ಟಿದ್ದರು ಸಹ ಸದರಿ ದುಡ್ಡನ್ನು ಕೊಟ್ಟಿಲ್ಲವೆಂದು ಪಿರ್ಯಾದುದಾರರು ಈ ಪ್ರಕರಣವನ್ನು ನನ್ನ ವಿರುದ್ದ ದಾಖಲಿಸಿರುತ್ತಾರೆ. ಸದರಿ ಪಿರ್ಯಾದುದಾರರಿಂದ ನಾನು 8 ಲಕ್ಷವನ್ನು ಪಡೆದ ಕುರಿತು ಕರಾರು ಆಗಿದ್ದು, ಸದರಿ ಮೊತ್ತವನ್ನು ನಾನು ಹಿಂದಿರುಗಿಸಿರುತ್ತೇನೆ. ತದ ನಂತರ ಸದರಿ ಕರಾರಿನಲ್ಲಿ ನಮೂದಿಸಿದ ಚೆಕ್ ನಂ ಈ ಪ್ರಕರಣದ ನಿಪಿ-1 ಆಗಿದ್ದು ಅದರಲ್ಲಿ 8 ಲಕ್ಷದ ಬದಲಿಗೆ 15 ಲಕ್ಷ ರೂ.ಗಳೆಂದು ನಮೂದಿಸಲಾಗಿದೆ. ಸದರಿ 8 ಲಕ್ಷ ಹಣವನ್ನು ನಾನು ಪಿರ್ಯಾದುದಾರರಿಗೆ ಹಿಂದಿರುಗಿಸಿರುತ್ತೇನೆ. ತದ ನಂತರ ಪಿರ್ಯಾದುದಾರರನು ನಾನು ಕರಾರಿನಲ್ಲಿ ನಮೂದಿಸಿದ 4 ಚೆಕ್ ಗಳಾದ ಕೆನರಾ ಬ್ಯಾಂಕ್ ನ 2 ಚೆಕ್ ಮತ್ತು ಪಂಜಾಬ್ ನ್ಯಾಷನಲ್ ಬ್ಯಾಂಕ್ ನ 2 ಚೆಕ್ ಗಳನ್ನು ಹಿಂತಿರುಗಿಸುವಂತೆ ಕೇಳಿದಾಗ ಪಿರ್ಯಾದುದಾರರು ಅವುಗಳಲ್ಲಿ ನಿಪಿ-1 ನ್ನು ನಗದೀಕರಿಣಕ್ಕಾಗಿ ಬ್ಯಾಂಕಿಗೆ ಹಾಜರುಪಡಿಸಿರುತ್ತಾರೆ. ತದ ನಂತರ ಈ ಪ್ರಕರಣ ದಾಖಲಾಗಿದ್ದು ನಾನು ಅದಕ್ಕಾಗಿ ನ್ಯಾಯಾಲಯಕ್ಕೆ ಓಡಾಡುತ್ತಿದ್ದೆನೆ.

(ಅರೋಪಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**